ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ ಇಲಾಖೆ

# ಲಿಂಗಾಧಾರಿತ ದೌರ್ಜನ್ಯ

## ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯದ ವಿವಿಧ ಮುಖ ಹಾಗೂ ಪರಿಹಾರಗಳ ಸಂಕಲನ

# ಮಹಿಳಾ ಸಮಾಖ್ಯಾ ಕರ್ನಾಟಕ ,



#೧೦, ದೀಪಕ್ ದಿವ್ಯ ನಿಲಯ, ೨ನೇ ಕ್ರಾಸ್, ಆರ್. ಎಂ.ವಿ. 2ನೇ ಹಂತ, ಸಂಜಯ ನಗರ, ಬೆಂಗಳೂರು ೫೬೦೦೯೪

www.karntakamahilasamakhya.org


80-23516745, +91-835106594


mskarnataka@gmail.com



ಬೆಳಗಾವಿ , ಚಿಕ್ಕಬಳ್ಳಾಪುರ , ಚಿತ್ರದುರ್ಗ, ಧಾರವಾಡ, ಗದಗ, ಹಾವೇರಿ, ಕೋಲಾರ, ರಾಮನಗರ, ಯಾದಗಿರಿ




ಮಲ್ಲಕ್ಕ ಮತ್ತು ರಾಮಕ್ಕ ತಮ್ಮೂರಲ್ಲಿ ಮಹಿಳೆಯರ ಮೇಲಾಗುವ ದೌರ್ಜನ್ಯವನ್ನು ಕುರಿತು ಚರ್ಚೆ ಮಾಡ್ತಿದ್ದಾರೆ



ರಾಮಕ್ಕ ನೋಡು, ಆ ಗಿರಿಜ ಹೆಣ್ಣು ಮಗು ಎಂದು ಗರ್ಭಪಾತ ಮಾಡಿಸಿಕೊಂಡಿದ್ದಾಳೆ.
ಹೌದಾ ಮಲ್ಲಕ್ಕ ಊರಿನ ಗೌಡ ಕೆಂಪಕ್ಕನ ಮಗಳ ಮೇಲೆ ಅತ್ಯಾಚಾರ ಮಾಡಿದ್ದಾನೆ. ಏನಿದು ಅನ್ಯಾಯ?



57%
ನೋಡು ಪ್ರಪಂಚದಲ್ಲಿ ಮಹಿಳಾ ದೌರ್ಜನ್ಯ ಎಷ್ಟಿದೆ ಎಂದು
33·5%
ನೋಡು ನಮ್ಮ ದೇಶದಲ್ಲಿ ಮಹಿಳಾ ದೌರ್ಜನ್ಯ ಎಷ್ಟಿದೆ ಎಂದು
20%
ನೋಡು ರಾಜ್ಯದಲ್ಲಿ ಮಹಿಳಾ ದೌರ್ಜನ್ಯ ಎಷ್ಟಿದೆ ಎಂದು
ರಾಮಕ್ಕಾ ನಮ್ಮೂರಂಗೆ ಬೇರೆ ಕಡೆನೂ ಮಹಿಳೆಯರ ಮೇಲೆ ಹಿಂಸೆ ಆಗುತ್ತಾ?
ಮಲ್ಲಕ್ಕಾ ನಮ್ಮ ಹಳ್ಳಿಯಲ್ಲೇ ಮಹಿಳೆಯರ ಮೇಲೆ ಹಿಂಸೆ ಆಗುವಾಗ ಬೇರೆ ಕಡೆ ಆಗದೇ ಇರುತ್ತಾ!





ರಾಮಕ್ಕ ಹೆಣ್ಣಿಗೇನೆ ಎಲ್ಲಾ ಹಿಂಸೆಗಳು ಆಗ್ತಾಯಿದೆ ಅಲ್ವಾ?
ಮಲ್ಲಕ್ಕ ಅದಕ್ಕೇನೆ ಇದು ಲಿಂಗಾಧಾರಿತ ಹಿಂಸೆ ಎಂದು ಕರೆಯುವುದು.
ರಾಮಕ್ಕ ಲಿಂಗಾಧಾರಿತ ಹಿಂಸೆ ಎಂದ್ರೇನು?
ಮಲ್ಲಕ್ಕ, ಲಿಂಗಾಧಾರಿತ ಹಿಂಸೆ ಎಂದರೆ, ಇದು ಗಂಡು ಮತ್ತು ಹೆಣ್ಣು-ಇಬ್ಬರನ್ನೂ ಒಳಗೊಂಡಿರುತ್ತದೆ. ಇದರಲ್ಲಿ ಹೆಣ್ಣುಮಕ್ಕಳು ಮತ್ತು ಮಹಿಳೆಯರು ಬಲಿಪಶುಗಳಾಗಿರುತ್ತಾರೆ. ಸಮಾಜ, ಸಮುದಾಯ, ದೇಶ ಮತ್ತು ರಾಜಕೀಯ ಎಲ್ಲವೂ ಇದಕ್ಕೆ ಶಾಮೀಲಾಗಿರುತ್ತದೆ. “ನೋಡು ಈ ಚಿತ್ರಗಳನ್ನು ನಿನಗೆ ಅರ್ಥ ಆಗುತ್ತದೆ


ಲಿಂಗಾಧಾರಿತ ಹಿಂಸೆ
ಲಿಂಗ ತಾರತಮ್ಯ ಒಂದು ಹಿಂಸೆ
ವಲಸೆ ಹೋಗುವ ಮಹಿಳೆಯ ಮೇಲೆ ಹಿಂಸೆ
ಬಾಲ್ಯ ವಿವಾಹವು, ಲಿಂಗ ತಾರತಮ್ಯವೂ ಹೌದು ಹಿಂಸೆಯೂ ಹೌದು
ಚುಡಾಯಿಸುವುದು
ಕೆಲಸ (ಸಂಘಟಿತ/ಅಸಂಘಟಿತ) ಮಾಡುವ ಸ್ಥಳದಲ್ಲಿ ಲೈಂಗಿಕ ಕಿರುಕುಳ
ಅತ್ಯಾಚಾರ
ಹೊಡೆಯುವುದು



ರಾಮಕ್ಕ ಚಿತ್ರ ನೋಡ್ದೆ, ಅಲ್ಲಿ ಬಾಲಕಿ, ಕಿಶೋರಿ, ಮತ್ತು ಮಹಿಳೆ – ಎಲ್ಲರ ಮೇಲೂ ಹಿಂಸೆ ಆಗ್ತಾ ಇದೆ. ಏನಿದರರ್ಥ?!
ಅದರರ್ಥ ಹೆಂಗಸರಿಗೆ ಗರ್ಭದಿಂದ ಗೋರಿಯವರೆಗೂ ಹಿಂಸೆ ತಪ್ಪಿದಲ್ಲ, ನೋಡಿಲ್ಲಿ.



ಮಗುವಿನ ಮೇಲೆ ಲೈಂಗಿಕ ಕಿರುಕುಳ
ಬಾಲಕಿಯ ಸಾಗಾಣಿಕೆ
500
ಹೆಣ್ಣು ಭ್ರೂಣ ಹತ್ಯೆ
ಅತ್ಯಾಚಾರ
ಗಂಡ ಹೆಂಡತಿಯನ್ನು ಹೊಡೆಯುತ್ತಿರುವುದು
ಹೆಣ್ಣು ಮಕ್ಕಳನ್ನು ಚುಡಾಯಿಸುವುದು



ಹಾಗಾದ್ರೆ ಹೆಣ್ಣಾಗಿ ಹುಟ್ಟಿದ್ದೇ ತಪ್ಪಾ??!!



ಯಾರು ಹೇಳಿದ್ದು, ಹೆಣ್ಣಿಗೆ ಬದುಕುವ ಹಕ್ಕಿದೆ ಮಲ್ಲಕ್ಕ.



ಇಷ್ಟೆಲ್ಲಾ ಇದ್ರೂ ಇದೆಲ್ಲಾ ಯಾಕಾಗುತ್ತೆ ರಾಮಕ್ಕ?
ಇದಕ್ಕೆಲ್ಲಾ "ಪಿತೃ ಪ್ರಧಾನ ಸಮಾಜ"ನೇ ಕಾರಣ ಮಲ್ಲಕ್ಕ
ಪಿತೃ ಪ್ರಧಾನ ಸಮಾಜ ಅಂದರೆ ಏನು ರಾಮಕ್ಕ?
ಪಿತೃ ಪ್ರಧಾನ ಸಮಾಜ ಅಂದರೆ...



ಪಿತೃ ಪ್ರಧಾನ ಸಮಾಜ
ಪುರುಷನಿಗೆ ಮೊದಲನೇ ಸ್ಥಾನಮಾನ
ಪುರುಷ ಮನೆಯ ಒಡೆಯನಾಗಿರುತ್ತಾನೆ
ಜಾತಿ ಪಂಚಾಯಿತಿಯಲ್ಲಿ ಪುರುಷನದೇ ಕಾರುಬಾರು



ಎಲ್ಲಾನೂ ಗಂಡಸರೇ ನೋಡಿಕೊಂಡ್ರೆ ತಪ್ಪೇನು?
ಎಲ್ಲಾನೂ ಗಂಡಸರೇ ನೋಡಿಕೊಳ್ಳೋದಾ? ಅವರೇ ನೋಡಿಕೊಳ್ಳೋದರಿಂದ್ಲೇ ಹೆಣ್ಣಿನ ಮೇಲೆ ಹಿಂಸೆ...
ಅವನಿಗೆ ಹೆಚ್ಚು ಕೂಲಿ,
ಅವಳಿಗೆ ಕಡಿಮೆ ಕೂಲಿ
ಅವನು ಹೆಣ್ಣು ನೋಡಲಿ,
ಅವಳು ಹ್ಞೂ ಎನ್ನಲಿ
ಅವನು ಮಾನವ ಜೀವಿ,
ಅವಳು ಭೋಗದ ವಸ್ತು
ಮೋಜು ಮಸ್ತಿ ಅವನಿಗೆ
ಮಕ್ಕಳ ಜವಾಬ್ದಾರಿ ಅವಳಿಗೆ



ನೀನು ಹಿಂಸೆ/ದೌರ್ಜನ್ಯ ಎಂದು ಹೇಳುತ್ತಿದ್ದೀಯ ಅಂದರೆ ಏನು ರಾಮಕ್ಕ?
ಹಿಂಸೆ/ದೌರ್ಜನ್ಯ ಒಂದಾ! ಎರಡಾ! ಏನೆಂದು ಸ್ವಲ್ಪ ವಿಚಾರ ಮಾಡೋಣ



ಆರ್ಥಿಕ ಹಿಂಸೆ
ವರದಕ್ಷಿಣೆ ಕೇಳುತ್ತಿರುವುದು
ಅವಳ ದುಡಿಮೆ ಅವನ ಹಿಡಿತದಲ್ಲಿ
₹50
ಹಣಕ್ಕಾಗಿ ಗಂಡನನ್ನೇ ಅವಲಂಬಿಸಿರುವುದು
ಗಂಡನ ಆಸ್ತಿಯಲ್ಲಿ ವಿಧವೆಗೆ ಪಾಲಿಲ್ಲ


ದೈಹಿಕ ಹಿಂಸೆ
ಹೊಡೆಯುತ್ತಿರುವುದು
ಸಿಗರೇಟಿನಿಂದ ಸುಡುವುದು
ಆಸಿಡ್ ಎರಚುವುದು
ಬಲವಂತದ ಲೈಂಗಿಕ ಕ್ರಿಯೆ


ಸಾಯಿಸುತ್ತೇನೆ ಎಂದು ಹೆದರಿಸುವುದು
ಬಂಧನದಲ್ಲಿಡುವುದು
ಮಾನಸಿಕ ಹಿಂಸೆ
ಮಗುವನ್ನು ಕಿತ್ತುಕೊಳ್ಳುವುದು
ಎರಡನೇ ಮದುವೆಯನ್ನು ಮಾಡಿಕೊಂಡು ಬರುವುದು


ಬಾಲ್ಯ ವಿವಾಹ
ಮರ್ಯಾದೆಗೇಡು ಹತ್ಯೆ
ಸಾಮಾಜಿಕ ಹಿಂಸೆ
ವರದಕ್ಷಿಣೆ ಪದ್ಧತಿ
ವಿಧವೆಯರಿಗೆ ಶುಭಕಾರ್ಯದಲ್ಲಿ
ಭಾಗವಹಿಸುವ ಹಕ್ಕಿಲ್ಲ


ಹೆಣ್ಣಿನ ಮೇಲೆ ಬೇರೆ ಬೇರೆ ರೀತಿಯಲ್ಲಿ ಹಿಂಸೆ ಆಗುತ್ತಿದ್ದರೂ ಪರಿಹಾರವಿಲ್ಲವಾ ಇದಕ್ಕೆ?
ಇದೆ ಮಲ್ಲಕ್ಕ ಇದೆ, ಸರ್ಕಾರ ನೊಂದ ಮಹಿಳೆಯರಿಗೆ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ.
ಯಾವ ಯಾವ ಯೋಜನೆಗಳು ಇದೆ ರಾಮಕ್ಕ
ಅದು ಸಖಿ: ಒನ್ ಸ್ಟಾಪ್ ಸೆಂಟರ್, ಸಾಂತ್ವನ- ಕೌಟುಂಬಿಕ ಸಲಹಾ ಕೇಂದ್ರಗಳು, ಸ್ವಾಧಾರ್ ಗೃಹ
ರಾಮಕ್ಕ ಸ್ವಲ್ಪ ವಿವರಿಸಿ ಹೇಳ್ತೀಯ
ಮಲ್ಲಕ್ಕ ವಿವರಿಸಿ ಹೇಳ್ತೀನಿ ತಿಳ್ಕೊ


ಆಪ್ತ
ಸಮಾಲೋಚನೆ
ಪುನರ್ವಸತಿ
ಒನ್ ಸ್ಟಾಪ್ ಸೆಂಟರ್ (ಸಖಿ)
ಸಖಿ
ಚಿಕಿತ್ಸೆ/ಆರೈಕೆ
ಆರ್ಥಿಕ ಪರಿಹಾರ. ರಕ್ಷಣೆ, ಆರೋಗ್ಯ ಸೌಲಭ್ಯ ಒದಗಿಸುವುದು
ಪೊಲೀಸ್
ನೆರವು
ಕಾನೂನು ಸಲಹೆ
ಮತ್ತು ನೆರವು

# ಸಮಾಲೋಚನೆ ನೀಡುವ ಕೇಂದ್ರ

ಕಾನೂನಿನ ನೆರವು










ಕೌಟುಂಬಿಕ ಸಲಹೆ ನೀಡುವುದು.

ಸುರಕ್ಷಿತ ವಾಸಸ್ಥಳ ಕಲ್ಪಿಸಲು ನೆರವಾಗುವುದು.




ಸ್ವ-ಉದ್ಯೋಗ ತರಬೇತಿ
ದೌರ್ಜನ್ಯಕ್ಕೊಳಗಾದ ಮಹಿಳೆ ಮತ್ತು
ಅವಲಂಬಿತ ಮಕ್ಕಳು
ಗರಿಷ್ಠ 3 ವರ್ಷ
ಉಚಿತ ಊಟ ಮತ್ತು ಆಶ್ರಯ
ಸ್ವಾಧಾರ್ ಗೃಹ ಯೋಜನೆ
( ತಾತ್ಕಾಲಿಕ ಆಶ್ರಯ ಗೃಹಗಳು)
ಆಪ್ತ ಸಮಾಲೋಚನೆ
ಸ್ವಾವಲಂಬಿಯಾಗಲು ವೃತ್ತಿ
ಕೌಶಲ್ಯ ಹಾಗೂ ವ್ಯಕ್ತಿತ್ವ
ವಿಕಸನ ತರಬೇತಿ


ನೊಂದವರಿಗೆ ಯೋಜನೆಯಿಂದ ಬೆಂಬಲ ಸಿಗುತ್ತದೆ. ಆದರೆ ಹಿಂಸೆ ಮಾಡಿದವರಿಗೆ ಶಿಕ್ಷೆ ಇಲ್ಲವಾ?
ಇದೆ ಮಲ್ಲಕ್ಕ, ಅದಕ್ಕಾಗಿಯೇ ಮಹಿಳಾ ಕಾನೂನುಗಳು/ ಕಾಯಿದೆಗಳು ಇದೆ
ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ
ಬಾಲ್ಯ ವಿವಾಹ ನಿಷೇಧ ಕಾಯ್ದೆ
ವರದಕ್ಷಿಣೆ ನಿಷೇಧ ಕಾಯ್ದೆ
ಹೆಣ್ಣು ಭ್ರೂಣ ಹತ್ಯೆ ನಿಷೇಧ ಕಾಯ್ದೆ

**ರಕ್ಷಣಾ ಆದೇಶದ ಉಲ್ಲಂಘನೆಗೆ ದಂಡ: ಒಂದು ವರ್ಷ ಜೈಲು ಶಿಕ್ಷೆ ಅಥವಾ ರೂ.20,000/- ದಂಡ, ಅಥವಾ ಎರಡೂ**




ಶೀಘ್ರ ಪರಿಹಾರ -
60 ದಿನಗಳಲ್ಲಿ




ರಕ್ಷಣಾ ಆದೇಶ





ವಾಸ ಸ್ಥಳ ಆದೇಶ

**ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯಡಿ- ಮಧ್ಯಂತರ ಮತ್ತು ಅಂತಿಮ ಆದೇಶಗಳನ್ನು ನ್ಯಾಯಾಲಯದಿಂದ ಪಡೆಯಬಹುದು.**




**ಆರ್ಥಿಕ ಪರಿಹಾರ ಆದೇಶ**







**ಮಕ್ಕಳ ಅಭಿರಕ್ಷೆ ಆದೇಶ**





**ಏಕ ಪಕ್ಷೀಯ ಆದೇಶ**

# ಬಾಲ್ಯ ವಿವಾಹ ನಿಷೇಧ ಕಾಯ್ದೆ ಏನು ಹೇಳುತ್ತದೆ?





ವರನಿಗೆ 21 ಹಾಗು ವಧುವಿಗೆ 18 ವರ್ಷವಾಗದೆ ಮದುವೆಯಾದಲ್ಲಿ ಮದುವೆ ಕಾನೂನಿನ ಪ್ರಕಾರ ರದ್ದಾಗುತ್ತದೆ





ಅಪ್ರಾಪ್ತ ವಯಸ್ಸಿನ ಹೆಂಡತಿಯೊಂದಿಗೆ ಸಂಭೋಗ ಮಾಡಿದಲ್ಲಿ






ಪಡೆಯುವುದು
₹
ಕೊಡುವುದು
ಹೆಂಗಸು ವರದಕ್ಷಿಣೆ
ಸಂಬಂಧಿತ ಮರಣ ಹೊಂದಿದರೆ,
ಕಾರಣರಾದವರಿಗೆ
7 ವರ್ಷ
ಕಠಿಣ ಸೆರೆವಾಸ
ವರದಕ್ಷಿಣೆ ನಿಷೇಧ ಕಾಯ್ದೆ
ಏನು ಹೇಳುತ್ತದೆ?
5 ವರ್ಷ ಜೈಲು
ಹಾಗೂ
₹ 15,000/- ದಂಡ









ಸ್ಕ್ಯಾನಿಂಗ್ ಮೂಲಕ ಲಿಂಗ ಪತ್ತೆ ಕಾನೂನುಬಾಹಿರ – ರೂ.1,00,000/- ದಂಡ ಹಾಗೂ2 ವರ್ಷ ಸ್ಕ್ಯಾನಿಂಗ್ ಸೆಂಟರ್ನ ಪರವಾನಗಿ ರದ್ದು.

# ಹೆಣ್ಣು ಭ್ರೂಣಹತ್ಯೆ ನಿಷೇಧ ಕಾಯ್ದೆ ಏನು ಹೇಳುತ್ತದೆ?

ವೈದ್ಯರಿಗೆ – ಮೊದಲನೇ ಸಲ 3 ವರ್ಷ ಸೆರೆವಾಸ ಮತ್ತು ರೂ.10,000/– ದಂಡ. ಒಂದಕ್ಕಿಂತ ಹೆಚ್ಚು ಸಲವಾದರೆ 5 ವರ್ಷ ಸೆರೆವಾಸ ಮತ್ತು ರೂ.50,000/– ದಂಡ.




ಯಾವುದೇ ವ್ಯಕ್ತಿ ಗರ್ಭಪಾತ ಮಾಡುವಾಗ ಮಹಿಳೆ ಸತ್ತರೆ 10 ವರ್ಷ ಸೆರೆವಾಸ ಹಾಗೂ ದಂಡ










**ಪರಿಣಾಮ: ಮಹಿಳೆ ಸ್ವ ಉದ್ಯೋಗ ಕೈಗೊಳ್ಳುವುದು, ಅಥವಾ MNREGA ಅಡಿ ದಿನನಿತ್ಯ ಕೆಲಸ ಮಾಡಿ ಸಮಾನ ವೇತನ ಪಡೆದು ಆರ್ಥಿಕ ಸ್ವಾವಲಂಬಿಯಾಗುವುದು**

| ನೊಂದ ಮಹಿಳೆ ಸಂಪರ್ಕಿಸಬೇಕಾದ ವಿಳಾಸಗಳು: | |
|---|---|
| ಗ್ರಾಮಗಳಲ್ಲಿ | ಹಿರಿಯ ಅಂಗನವಾಡಿ ಕಾರ್ಯಕರ್ತೆ/ಮೇಲ್ವಿಚಾರಕಿಯರು |
| ತಾಲ್ಲೂಕು | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು |
| ಜಿಲ್ಲೆ | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ |

| ಸಹಾಯವಾಣಿಗಳು | |
|---|---|
| ಮಹಿಳಾ ಸಹಾಯವಾಣಿ | 181 |
| ಮಕ್ಕಳ ಸಹಾಯವಾಣಿ | 1098 |
| ಹಿರಿಯ ನಾಗರಿಕರ ಸಹಾಯವಾಣಿ | 1090 |
| ರಾಷ್ಟ್ರೀಯ ಮಹಿಳಾ ಆಯೋಗ | 011-26942369, 26944754 |
| ತುರ್ತು | 112 |

# ಮಹಿಳಾ ಸಮಾಖ್ಯಾ ಕರ್ನಾಟಕ
## ಪರಿಚಯ

ಮಹಿಳಾ ಸಮಾಖ್ಯಾ ಕರ್ನಾಟಕ ಗ್ರಾಮೀಣ ಮಹಿಳೆಯರಿಗೆ ಶಿಕ್ಷಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ವಿನ್ಯಾಸಗೊಳಿಸಿದ ಕಾರ್ಯಕ್ರಮವಾಗಿದ್ದು, ಇದನ್ನು ಸಂಘಗಳ ನೋಂದಣಿ ಕಾಯ್ದೆ –1860ರಡಿಯಲ್ಲಿ  ನೋಂದಾಯಿತ ಸಂಸ್ಥೆಯಾಗಿದೆ. 1986ರ ಹೊಸ ಶಿಕ್ಷಣ ನೀತಿಯಲ್ಲಿ ಮಹಿಳಾ ಸಮಾನತೆ ಸಾಧಿಸಲು ಶಿಕ್ಷಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ***ಸಕಾರಾತ್ಮಕ ಮಧ್ಯಸ್ಥಿಕೆ ಪಾತ್ರ*** ವಹಿಸಲು ಈ ಕಾರ್ಯಕ್ರಮ ಜನ್ಮಿಸಿದೆ. *ಸಮಾಖ್ಯಾ ಎನ್ನುವುದು ಸಮ– ಎಂದರೆ ಸಮಾನ* ಮತ್ತು *ಆಖ್ಯ ಎಂದರೆ ಮೌಲ್ಯ ಎನ್ನುವ ಎರಡು ಸಂಸ್ಕೃತ ಶಬ್ದಗಳ ಸಂಗಮದಿಂದ ಉಗಮವಾಗಿದೆ.* ಮಹಿಳಾ ಸಮಾಖ್ಯಾ ಕರ್ನಾಟಕ 2016–17ರಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ಪ್ರಸಕ್ತ, ಮಹಿಳಾ ಸಮಾಖ್ಯಾ 18 ಜಿಲ್ಲೆಗಳ ಗ್ರಾಮೀಣ ಬಡ ಕುಟುಂಬಗಳ 2 ಲಕ್ಷಕ್ಕೂ ಹೆಚ್ಚು ಮಹಿಳೆಯರು, 25 ಸಾವಿರ ಹದಿಹರೆಯದ ಕಿಶೋರಿಯರು, 20 ಸಾವಿರ ಹದಿಹರೆಯದ ಕಿಶೋರರು ಮತ್ತು ಯುವಕರೊಂದಿಗೆ ಕಾರ್ಯನಿರ್ವಹಿಸುತ್ತಿದೆ.

**Designed and developed by : MAHILA SAMAKHYA KARNATAKA**
**Bangalore .  Ph: 08023516745 , 8951065954 email : mskarantaka@gmail.com**
**www.karnatakamahilasamakhya.org**